# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ 137/2021

ಸಿ.ಡಬ್ಲ್ಯೂಃ 01 ಪಿಡಬ್ಲ್ಯೂಃ 1

ದಿಃ 03-05-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಪಾಟೀ ಸವಾಲು ಆರೋಪಿಪರ ಶ್ರೀ ಎಂವಿಆರ್ ವಕೀಲರಿಂದ ;

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸಮಾಡಿರುತ್ತೇನೆ. ನನಗೆ ಕನ್ನಡ ಹಾಗೂ ಇಂಗ್ಲಿಷ ಓದಲು ಹಾಗೂ ಬರೆಯಲು ಬರುತ್ತದೆ ಎಂದರೆ ಸರಿ. ನಮ್ಮ ಕಿರಾಣಿ ಅಂಗಡಿಯು ನನ್ನ ತಂದೆಯವರು ಶುರುಮಾಡಿದ್ದು ಯಾವ ಇಸ್ವಿವಿಯಲ್ಲಿ ಮಾಡಿದ್ದು ನನಗೆ ನೆನಪಿಲ್ಲ. ನನಗೆ ಹುಟ್ಟಿನಿಂದಲೇ ನಮ್ಮ ಕಿರಾಣಿ ಅಂಗಡಿ ಇರುವ ಬಗ್ಗೆ ಗೊತ್ತಿದ್ದು ಯಾವ ಇಸ್ವಿಯಲ್ಲಿ ಶುರು ಮಾಡಿದ್ದು ಎಂದು ನನಗೆ ಗೊತ್ತಿಲ್ಲ ಈಗಲು ಸಹ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಈ ಸ್ವತ್ತಿನಲ್ಲಿ ಕಿರಾಣಿ ಅಂಗಡಿಯನ್ನು ಯಾವಾಗ ಶುರು ಮಾಡಿದ್ದು ಎಂದು ನೀಡುತ್ತಾರೇ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು **2019** ರಿಂದ **2020, 2020** ರಿಂದ **2021** ರ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು **2022** ರಿಂದ **2023** ರ ರಸೀದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಯಾವ ದಿನಾಂಕ ಹಾಗೂ ತಿಂಗಳಲ್ಲಿ ಪರವಾನಿಗೆಯನ್ನು ನೀಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಈ ಸ್ವತ್ತು ಅಗಿರುವುದರಿಂದ ಕೈ ಬರಹದಲ್ಲಿ ಪರವಾನಿಗೆಯನ್ನು ನೀಡುವುದಿಲ್ಲ ಎಂದರೆ ಅವರೆ ನೀಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ನಿಶಾನೆ ಪಿ-**6** ತೋರಿಸಲಾಗಿ ಅದರಲ್ಲಿ ಪಂಚಾಯಿತಿ ರವರು ಜನರಲ್ ಯಾಗಿ ಪರವಾನಿಗೆ ಯನ್ನು ನೀಡುವುದಿಲ್ಲ ಎಂದರೆ ಸಾಕ್ಷಿಯು ಪರವಾನಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಸ್ವತ್ತು ಅಗಿರುವುದರಿಂದ ಕೈ ಬರಹದ ಪರವಾನಿಗೆ ಯನ್ನು ಪಂಚಾಯಿತಿ ರವರು ನೀಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಿರಾಣಿ ಅಂಗಡಿಯ ಬ್ಯಾಂಕ್ ಖಾತೆಯು ನಿಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದರೆ ಮೊದಲು ಇತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆಯು ಕಿರಾಣಿ ಅಂಗಡಿಯ ವ್ಯವಹಾರ ಮಾವುದ ಸಲುವಾಗಿ ಬ್ಯಾಂಕಿಗೆ ಹಣ ವನ್ನು ಕಟ್ಟುವ ಹಾಗೂ ತೆಗೆದು ಕೊಳ್ಳುವುದನ್ನು ಮಾಡುತ್ತಿದ್ದರು ಎಂದರೆ ಪ್ರಾರಂಭದಲ್ಲಿ ಮಾಡುತ್ತಿದ್ದರು. ನನ್ನ ತಂದೆಯು ಯವಾಗಿನಿಂದ ಬ್ಯಾಂಕಿನ ಜೊತೆಗೆ ವ್ಯಾವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆಗೆದು ಮೊದಲು ನನ್ನ ತಂದೆ ಗ್ರಾಮಮಿ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದು ಈ ಕೃಷ್ಣ ಬ್ಯಾಂಕಿನಲ್ಲಿ ನಾನು ಹಾಗೂ ನನ್ನ ತಂದೆಯು ಖಾತೆಯನ್ನು ಹೊಂದಿರುತ್ತಾರೆ ಎಂದು ನೂಡಿಯುತ್ತಾರೆ.

R. Sheshadri

ನಾನು ಕಿರಾಣಿ ಅಂಗಡಿಯನ್ನು 10 ವರ್ಷದಿಂದ ನೆಡೆಸುತ್ತಿದ್ದೇನೆ. 2010 ರಿಂದ ನೀವು ಕಿರಾಣಿ ಅಂಗಡಿಯನ್ನು ನಡೆಸುತ್ತಿದ್ದೀರಿ ಎಂದರೆ 2012 ಎಂದು ಸಾಕ್ಷಿಯು ನುಡಿಯುತ್ತಾರೆ. 2012 ರಿಂದ ಕಿರಾಣಿ ಅಂಗಡಿಯ ಸಮಾನುಗಳನ್ನು ತೆಗೆದು ಕೊಳುಳ್ಳುವ ಮಾರಾಟ ಮಾಡುವ ವ್ಯವಹಾರವನ್ನು ಕೃಷ್ಣ ಗ್ರಾವಮಿಣ ಬ್ಯಾಂಕಿನ ಕೊಂಬಳಿ ಬ್ರ್ಯಾಂಚ್‌ನ ಜೊತೆಗೆ ಮಾಡುತ್ತಿದ್ದೇ ಎಂದರೆ ಸರಿ. ಈಗಲು ನಾನು ಕಿರಾಣಿ ಅಂಗಡಿಯನ್ನು ನಡೆಸುತ್ತಿದ್ದೇನೆ ಎಂದರೆ ಸರಿ ಈಗಲು ಸಹ ಸದರಿ ಬ್ಯಾಂಕಿನ ಜೊತೆಗೆ ತೆಗೆದು ಕೊಳ್ಳುವ ಹಾಗೂ ಕೊಡುವ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿ. ಕಿರಾಣಿ ಅಂಗಡಿಯಲ್ಲಿ ದಿನಾಲೂ ಅಂದಾಜು ಎಷ್ಟು ಹಣ ಉಳಿತಾಯ ಅಗಬಹುದು ಎಂದರೆ ರೂ.600 ರಿಂದ 800 ಗಳು. ನಾನು ಉಳಿತಾಯ ಹಣವನ್ನು ಒಂದೊದು ಸರಿ ತಿಂಗಳಿಗೊಮ್ಮೆ ಕಟ್ಟಿತ್ತಿದ್ದೇವು ಅಂದಾಜು ಎಷ್ಟು ಎಂದರೆ ರೂ.6000 ರಿಂದ 8000 ಗಳನ್ನು ಕಟ್ಟುತ್ತಿದ್ದೇವು. ಕಿರಣಿ ಅಂಗಡಿಯ ಹಣವನ್ನು ಬ್ಯಾಂಕಿನಿಂದ 8 ದಿನಕ್ಕೆ ಒಂದು ಸರಿ ಅಥವಾ 15 ದಿನಕ್ಕೆ ಒಂದು ಸರಿ ತೆಗೆದುಕೊಳ್ಳುತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೇಗೆ ಅನುಕೂಲ ಅಗುತ್ತದೆ ಹಾಗೆ ತೆಗೆದುಕೊಳ್ಳುತಿದ್ದೇವು. ಸದರಿ ಬ್ಯಾಂಕಿನ ಪಾಸ್ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಹಾಜರು ಪಡಿಸುತ್ತೇನೆಂದು ನುಡಿಯುತ್ತರೆ. ಸದರಿ ಬ್ಯಾಂಕಿನ ಸ್ಟೇಟ್ ಮೆಂಟನ್ನು 01.01.2018 ರಿಂದ 30.06.2019 ರವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2012 ರಿಂದ 2017 ರವರೆಗೆ ಬ್ಯಾಕಿಂನ ಸ್ಟೇಟ್‌ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಕಲು ತೊಂದರೆ ಇಲ್ಲ. ಸಾಕ್ಷಿಯು ಮುಂದುರೆದು ಹಾಜರುಪಡಿಸು ತ್ತೇನೆಂದು ನುಡಿಯುತ್ತಾರೆ. ನಾನು ಅರೋಪಿತನ ಚೆಕ್ ನ್ನು ಗ್ರಾಮಿಣ ಬ್ಯಾಂಕಿಗೆ ಹಾಕಿದ್ದು ನನ್ನ ಖಾತೆಯ ನಂಬರ್ ನ್ನು ನನ್ನ ದೂರಿನಲ್ಲಿ ಬರೆಸಿರುವುದಿಲ್ಲವೆಂದರೆ ನೆನಪಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಶಾನೆ ಪಿ.2 ನ್ನು ತೊರಿಸಿ ಅದರಲ್ಲಿರುವ ಖಾತೆಯ ನಂಬರ್ ನನ್ನದಲ್ಲ ಎಂದು ನುಡಿದಿರುತ್ತಾರೆ. ಅರೋಪಿಯು ನೀಡಿರುವ ಚೆಕನ್ನು ತೊರಿಸಿದರೆ ಅದರಲ್ಲಿರುವ ನಿಮ್ಮ ಖಾತೆಯ ನಂಬರನ್ನು ಗುರುತಿಸುತ್ತೀರಾ ಎಂದರೆ ಇಲ್ಲಾ ಮಾಹಿತಿಯು ನೆನಪಿರುವುದಿಲ್ಲ. ಚೆಕ್ ನ್ನು ಕಾಲೆಕ್ಷನಗೆ ಹಾಕಿದಾಗ ನೀಡುವ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಖಾತೆಯ ನಂಬರ್ ನ್ನು ಪೂರ್ತಿಯಾಗಿ ಹೇಳಲು ಅಗುವುದಿಲ್ಲ ಆದರೆ ಕೊನೆಯ 5 ನಂಬರ್ ನ್ನು ಹೇಳುತ್ತೇನೆ. ಗ್ರಾಮ ಪಂಚಾಯಿತಿಯವರು ನಿಶಾನೆ ಪಿ.6 ನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ. ನಿಶಾನೆ ಪಿ.9 ಕ್ಕೆ ಬ್ಯಾಂಕಿನ ಮ್ಯಾನೇಜರವರು ಸೀಲನ್ನು ಹಾಕಿ ಕೊಡುತ್ತಾರೆಂದರೆ ಸರಿ. ಬ್ಯಾಂಕಿನ

R. [signature]

ಸ್ಟೇಟ್ ಮೆಂಟನ ಪ್ರತಿ ಪೇಜಿಗೆ ಸೀಲನ್ನು ಹಾಕಿಕೊಡುತ್ತಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮೊದಲನೇ ಪೇಜಿಗೆ ಸೀಲನ್ನು ಹಾಕಿರುತ್ತಾರೆಂದು ನುಡಿಯುತ್ತಾರೆ. ನಿಶಾನೆ ಪಿ.9 ಕ್ಕೆ ಸೀಲನ್ನು ಹಾಕಿರುತ್ತಾರೆ ಎಂದರೆ ಸರಿ. ದಿಃ**29.06.2019** ರಂದು ಕೊಟ್ಟಿರುವ ಸ್ಟೇಟ್‌ಮೆಂಟ್ ಗೆ ಸೀಲ್ ನ್ನು ಹಾಕಿರುತ್ತಾರೆ. ಯಾವುದೇ ಸ್ಟೇಟ್‌ಮೆಂಟನ್ನು ಬ್ಯಾಂಕಿನವರು ನೀಡದೆ ನಾನೆ ಸೃಷ್ಟಿ ಮಾಡಿ ಹಾಕಿರುತ್ತೇನೆಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

R. S Gosh...

(ಶ್ರೀಮತಿ.ಅಕ್ಷತಾ.ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.